# ಕೊಬ್ಬರಿ ದುನಿಯಾ



**2500 ಕೋಟಿ ರೂಪಾಯಿಗೂ ಹೆಚ್ಚಿನ ವಹಿವಾಟು ಸಾಮರ್ಥ್ಯದ ಕೊಬ್ಬರಿ ವ್ಯಾಪಾರ ರಾಜ್ಯದ ಪ್ರಮುಖ ವಾಣಿಜ್ಯ ಚಟುವಟಿಕೆ. ತಿಪಟೂರು ಏಷ್ಯದ ಅತಿದೊಡ್ಡ ಕೊಬ್ಬರಿ ಮಾರುಕಟ್ಟೆ. ಕೊಬ್ಬರಿ ಉತ್ಪನ್ನ, ತೆಂಗು ಬೆಳೆಗಾರರು ಮತ್ತದರ ವ್ಯಾಪಾರದ ಸುತ್ತ ಒಂದು ಸಮಗ್ರ ನೋಟ.**

* ದಿಲಾವರ್ ರಾಮದುರ್ಗ

ಕರ್ನಾಟಕದ ತುಮಕೂರು, ಹಾಸನ ಮತ್ತು ಚಿತ್ರದುರ್ಗ ಜಿಲ್ಲೆಗಳ ಪ್ರಮುಖ ವಾಣಿಜ್ಯ ಬೆಳೆ ಕೊಬ್ಬರಿ. ತಿಪಟೂರು ಕೊಬ್ಬರಿ ಹೆಸರುವಾಸಿ. ಸದ್ಯ ವಾರ್ಷಿಕ 800 ಕೋಟಿ ರೂಪಾಯಿ ವಹಿವಾಟು ದಾಟಿದೆ.

ಮಣ್ಣು ಹಾಗೂ ನೀರಿನ ಗುಣದಿಂದ ತಿಪಟೂರು ಕೊಬ್ಬರಿ ಸ್ವಾದಿಷ್ಟ. ಇಂಥ ಗುಣಮಟ್ಟದ ಕೊಬ್ಬರಿ ವಿಶ್ವದ ಬೇರೆಲ್ಲೂ ಲಭ್ಯವಿಲ್ಲ. ಇದರ ಪೇಟೆಂಟ್‌ಗೂ ಯತ್ನ ನಡೆದಿದೆ. ತಿಪಟೂರು ಏಷ್ಯಾದ ಅತಿದೊಡ್ಡ ಕೊಬ್ಬರಿ ಮಾರುಕಟ್ಟೆಯೂ ಹೌದು. ವಾರ್ಷಿಕ 2500 ಕೋಟಿ ರೂಪಾಯಿಗೂ ಹೆಚ್ಚಿನ ವಹಿವಾಟು ಸಾಮರ್ಥ್ಯ ಇದಕ್ಕಿದೆ.

ವಿಶ್ವ ಖಾದ್ಯ: ಕೊಬ್ಬರಿ ಖಾದ್ಯ ವಿಶ್ವದೆಲ್ಲೆಡೆ ಲಭ್ಯ. 2010ರ ವರದಿಯಂತೆ ವಿಶ್ವದ ಕೊಬ್ಬರಿ ಉತ್ಪಾದನೆ 5.2 ದಶಲಕ್ಷ ಟನ್. ಕೊಬ್ಬರಿ ಖಾದ್ಯ ಉತ್ಪಾದನೆ 1.86 ದಶಲಕ್ಷ ಟನ್. ತಿನ್ನುವ ಕೊಬ್ಬರಿ ಮತ್ತದರ ಎಣ್ಣೆಯ ಉತ್ಪಾದನೆಯಲ್ಲಿ ಫಿಲಿಪ್ಪೀನ್ಸ್ ಮುಂಚೂಣಿಯ ದೇಶ. ಫಿಲಿಪ್ಪೀನ್ಸ್ ವಿಶ್ವಕ್ಕೆ ಬೇಕಾಗುವ ಶೇಕಡಾ 42ರಷ್ಟು ಪ್ರಮಾಣದ ಕೊಬ್ಬರಿ ಮತ್ತು ಕೊಬ್ಬರಿ ಎಣ್ಣೆ ಉತ್ಪಾದಿಸುತ್ತದೆ. ನಂತರದ ಸ್ಥಾನಗಳಲ್ಲಿ ಇಂಡೋನೇಷ್ಯಾ (ಶೇ 25), ಭಾರತ (ಶೇ 12) ಮತ್ತಿತರ ದೇಶಗಳಿವೆ.

ಕೊಬ್ಬರಿ ಖಾದ್ಯ ಉತ್ಪಾದನೆಯ ಶೇಕಡಾ 72ರಷ್ಟು ಪ್ರಮಾಣದ ಖಾದ್ಯವನ್ನು ಫಿಲಿಪ್ಪೀನ್ಸ್ ವಿಶ್ವಕ್ಕೆ ರಫ್ತು ಮಾಡುತ್ತದೆ. ಅಂದರೆ 0.5 ದಶಲಕ್ಷ ಟನ್‌ಗಳಷ್ಟು ಆಹಾರ ಖಾದ್ಯ (ಎಫ್‌ಎಓ, 2011, ಆಯಿಲ್ ವರ್ಲ್ಡ್. 2011, ಯುಎಸ್‌ಡಿಎ, 2013 ವರದಿಯಂತೆ.) ಯೂರೋಪ್‌ನಲ್ಲಿ ಕೊಬ್ಬರಿ ಖಾದ್ಯ ಸಹಜ ಬಳಕೆಯಾಗಿದೆ. ಆದರೆ 1990ರಿಂದ ಬೇಡಿಕೆಗೆ ಅನುಗುಣ–ವಾಗಿ ಕೊಬ್ಬರಿ ರಫ್ತಾಗುತ್ತಿಲ್ಲ. 1992ರಲ್ಲಿ 950 ಸಾವಿರ ಟನ್ ಕೊಬ್ಬರಿ ರಫ್ತಾಗಿತ್ತು. 2013ರಷ್ಟೊತ್ತಿಗೆ 15 ಸಾವಿರ ಟನ್‌ಗೆ ಇಳಿದಿದೆ. ಬೇಡಿಕೆ ಇದ್ದೂ ಲಭ್ಯತೆಯ ಕೊರತೆಯನ್ನು ಇದು ಸೂಚಿಸುತ್ತದೆ.

## ಥಾಯ್ ಏಕಸ್ವಾಮ್ಯ

ನಾರ್ವೆಯ ಸೂಪರ್ ಮಾರ್ಕೆಟ್‌ಗಳಲ್ಲಿ ಏಷ್ಯಾ ಮೂಲದವರಿಗೆ ಲಭ್ಯವಾಗುವ ಏಕಮಾತ್ರ ಕೊಬ್ಬರಿ ಥಾಯ್ಲೆಂಡಿನ ‘ಥಾಯ್ ಕೊಕೊನಟ್’. ನೆದರ್ಲ್ಯಾಂಡ್, ಪ್ಯಾರಿಸ್‌ನ ಮಳಿಗೆಗಳಲ್ಲೂ ನಾನಿದನ್ನು ಗಮನಿಸಿದ್ದೇನೆ. ಇದರ ಆಹಾರ ಖಾದ್ಯಗಳನ್ನು (ಚಾಕೊಲೇಟ್, ಕುಕೀಸ್ ಇತ್ಯಾದಿ) ಸವಿದಿದ್ದೇನೆ. ತಿಪಟೂರು ಕೊಬ್ಬರಿ ಬಳಸಿದ ಖಾದ್ಯವನ್ನೂ (ಕೊಬ್ಬರಿ ಮಿಠಾಯಿ, ಕಾಯಿ ಹೋಳಿಗೆ, ಚಾಕೊಲೇಟ್, ಬರ್ಫಿ ಇತ್ಯಾದಿ) ಸವಿದಿದ್ದೇನೆ. ಸ್ವಾದದಲ್ಲಿ ವ್ಯತ್ಯಾಸವಿದೆ. ತಿಪಟೂರು ಕೊಬ್ಬರಿಯಲ್ಲಿರುವ ಸ್ವಾದ ಥಾಯ್